ದಿನಾಂಕ : 18-02-2017

**ಗೆ,**
**ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು,**
**ಅರಣ್ಯ, ಪರಿಸರ ಮತ್ತು ಜೀವಶಾಸ್ತ್ರ ಇಲಾಖೆ,**
**ವಿಧಾನಸೌಧ, ಬೆಂಗಳೂರು.**

*ಮಾನ್ಯರೇ,*

'ಸಮರ್ಥ ಭಾರತ' ಒಂದು ಸೇವಾ ಚಟುವಟಿಕೆಗಳನ್ನು ಸಮನ್ವಯ ಮಾಡುವ ಸರಕಾರೇತರ ಸಂಸ್ಥೆಯಾಗಿದೆ. (ಎನ್‌ಜಿಓ) ಕಳೆದ 3 ವರ್ಷಗಳಿಂದ ಕರ್ನಾಟಕದಾದ್ಯಂತ ಅನೇಕ ರೀತಿಯ ಸೇವಾ ಕಾರ್ಯಗಳಿಗೆ ಕೇಂದ್ರ ಬಿಂದುವಾಗಿ ನೂರಾರು ಸಾಮಾಜಿಕ ಕಾರ್ಯಕರ್ತರನ್ನು ಸಮಾಜದ ಸೇವೆಗೆ ತೊಡಗಿಸುವಲ್ಲಿ ಯಶಸ್ವಿಯಾಗಿದೆ.

05 ಜೂನ್ 2017 ರಂದು "ವಿಶ್ವ ಪರಿಸರ ದಿನ" ವನ್ನಾಗಿ ಆಚರಿಸಲಾಗುತ್ತದೆ. ಈ ಸಂದರ್ಭದಲ್ಲಿ ರಾಜ್ಯದಾದ್ಯಂತ 1 ಕೋಟಿಗೂ ಹೆಚ್ಚು ಸಸಿಗಳನ್ನು ನೆಡುವ ಯೋಜನೆಯನ್ನು ಸಮರ್ಥ ಭಾರತ ಹಾಕಿಕೊಂಡಿದೆ. ಈ ಬೃಹತ್ ಕಾರ್ಯಕ್ಕೆ ಅನೇಕ ಸಂಘ ಸಂಸ್ಥೆಗಳು, ಮಠಗಳು, ಮಂದಿರಗಳು ಮತ್ತು ವಿದ್ಯಾಸಂಸ್ಥೆಗಳು ಕೈ ಜೋಡಿಸುತ್ತಿವೆ. ಈಗಾಗಲೇ ಆಸಕ್ತಿಯನ್ನು ತೋರಿಸಿರುವ ಸಂಘಟನೆಗಳ ಪಟ್ಟಿಯನ್ನು ಈ ಪತ್ರದೊಡನೆ ಲಗತ್ತಿಸಲಾಗಿದೆ. ಬರುವ ದಿನಗಳಲ್ಲಿ ಇನ್ನೂ ನೂರಾರು ಸಂಘಟನೆಗಳು, ಸಾವಿರಾರು ನಾಗರಿಕರು ಈ ಕಾರ್ಯಕ್ಕೆ ಕೈ ಜೋಡಿಸುವ ಭರವಸೆ ಇದೆ.

ಬೃಹತ್ ಸಂಖ್ಯೆಯ ಸಸಿಗಳು ಈ ಸಂದರ್ಭದಲ್ಲಿ ಬೇಕಾಗಿರುವುದರಿಂದ ತಮ್ಮ ಇಲಾಖೆಯು ಈಗಲೇ ಅಗತ್ಯ ಕ್ರಮಗಳನ್ನು ಕೈಗೊಂಡು ಜೂನ್ 2017ರ ಮೊದಲು ಒಂದು ಕೋಟಿಗೂ ಹೆಚ್ಚು ಸಸಿಗಳನ್ನು ನಮಗೆ ಒದಗಿಸಿಕೊಡಬೇಕೆಂದು ಈ ಮೂಲಕ ಪ್ರಾರ್ಥಿಸುತ್ತೇನೆ.

*ವಂದನೆಗಳೊಂದಿಗೆ,*

ತಮ್ಮ ವಿಶ್ವಾಸಿ,

**(ಪ್ರದೀಪ್ ಭಾರಧ್ವಾಜ್)**
ಅಧ್ಯಕ್ಷರು, ಸಮರ್ಥ ಭಾರತ ಟ್ರಸ್ಟ್

**ಪ್ರತಿ :**
ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಭವನ, ಮಲ್ಲೇಶ್ವರ.

**ಲಗತ್ತು :**

- ಸಸಿ ನೆಡುವ ಕಾರ್ಯದಲ್ಲಿ ಆಸಕ್ತಿ ತೋರಿಸಿರುವ ಪಟ್ಟಿಯನ್ನು ಲಗತ್ತಿಸಿದೆ.

- ರಾಷ್ಟ್ರೋತ್ಥಾನ ಪರಿಷತ್
- ಸೇವಾ ಭಾರತಿ
- ಯೂತ್ ಫಾರ್ ಸೇವಾ
- ಸಂಸ್ಕೃತ ಭಾರತಿ
- ಭಾರತೀಯ ಮಜ್ದೂರ್ ಸಂಘ
- ಭಾರತೀಯ ಜನತಾ ಪಾರ್ಟಿ
- ವನವಾಸಿ ಕಲ್ಯಾಣ
- ಹಿಂದೂಸೇವಾ ಪ್ರತಿಷ್ಠಾನ
- ಗ್ರಾಮ ವಿಕಾಸ ಪ್ರಕಲ್ಪ
- ವಿವೇಕಾನಂದ ಯೋಗ ಅನುಸಂಧಾನ ಸಂಸ್ಥೆ
- ಸಮರ್ಥ ಭಾರತ
- ಸಕ್ಷಮ
- ರಾಷ್ಟ್ರೀಯ ಸ್ವಯಂ ಸೇವಕಾ ಸಂಘ
- ರಾಷ್ಟ್ರ ಸೇವಿಕಾ ಸಮಿತಿ
- ಸೇವಾ ಇನ್ ಆ್ಯಕ್ಷನ್
- ಎಬಿವಿಪಿ
- ವಿಶ್ವ ಹಿಂದೂ ಪರಿಷತ್
- ಬಜರಂಗ ದಳ
- ಕೇಶವ ಸೇವಾ ಸಮಿತಿ
- ಹಿಂದೂ ಜಾಗರಣ ವೇದಿಕೆ
- ಸ್ವದೇಶಿ ಜಾಗರಣಾ ಮಂಚ್